3

# ವಿಧೇಯತೆ: ದೇವರ ಲೆಕ್ಕಾಚಾರ

*ಈ ಪುಸ್ತಕದ ಪ್ರವಾದನಾವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನೆಂದರೆ ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದು ಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದುಹಾಕುವನು. ಯಾವನಾದರೂ ಈ ಪ್ರವಾದನ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು (ಪ್ರಕಟನೆ 22:18, 19).*

ಮನುಷ್ಯನ ದೃಷ್ಟಿಯಲ್ಲಿ ಸಣ್ಣದಾದ ವಿಷಯವು, ದೇವರ ದೃಷ್ಟಿಯಲ್ಲಿ ಪ್ರಮಾದದ ವಿಷಯವಾಗಿರುತ್ತದೆ. ದೇವರಿಗೆ ವಿಧೇಯರಾಗುವ ವಿಷಯದಲ್ಲಿ ಜಾನ್ L. ಗಿರಾರ್ಡಿಯ ಪ್ರಮುಖ ಚರ್ಚೆಯನ್ನು ನೀಡಿರುವರು:

> ಪ್ರತಿಯೊಂದು ಸಿದ್ಧಾಂತಕ್ಕೂ, ದೈವಿಕ ಎಚ್ಚರಿಕೆಯು ಅಗತ್ಯವಾಗಿರುತ್ತದೆ. ಆಡಳಿತಕ್ಕೂ ಮತ್ತು ಆರಾಧನೆಗೂ ಅದು ಅವಶ್ಯವಾಗಿರುತ್ತದೆ. ದೇವಗ್ರಂಥದಲ್ಲಿ ತಿಳಿಸಲಾರದ ಯಾವುದೇ ಸಂಗತಿಗಳು, ಅಥವಾ ಅಪ್ಪಣೆ ಮಾಡಲಾರದ ವಿಷಯಗಳಲ್ಲಿರುವ ಯಾವುದೇ *ಪರಿಣಾಮಗಳನ್ನು* ನಿರಾಕರಿಸಲಾಗಿದೆ.[1]

### ಅಧಿಕಾರದ ನಿಯಮಾವಳಿಗಳು

ನಮ್ಮ ಆಚರಣೆಯು ದೈವೀಕವಾಗಿದೆಯೋ ಎಂದು ಪರೀಕ್ಷಿಸಬೇಕಾಗಿದ್ದರೆ, ನಾಲ್ಕು ವಿಧವಾದ ಅಧಿಕಾರದ ನಿಯಮಗಳನ್ನು ನಾವು ಅರಿಯಬೇಕು.

(1) ಆಚರಣೆಯ ಕುರಿತು ದೇವರು ಸಕಾರಾತ್ಮಕವಾದ ಹೇಳಿಕೆಯನ್ನಾಗಲೀ ಅಥವಾ ಆಜ್ಞೆಯನ್ನಾಗಲೀ ನೀಡಿದ್ದರೆ, ಅದಕ್ಕೆ ವಿಧೇಯರಾಗಬೇಕು. ಅಪೊಸ್ತಲರಿಂದ ದೀಕ್ಷಾಸ್ನಾನ ಹೊಂದಿದವರಿಗೆ ಉಪದೇಶಮಾಡಬೇಕೆಂದು ಯೇಸು ತಿಳಿಸಿ, "ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಮಾಡಿರಿ ಅಂದನು" (ಮತ್ತಾಯ 28:20ಎ).

(2) ಒಂದು ಆಚರಣೆಯನ್ನು ದೇವರು ಅನುವಾದಿಸದೆ ಇದ್ದರೆ, ನಾವು ಅದನ್ನು ಮಾಡಬಾರದು. ನಿಷೇದಿಸಲಾದ ವಿಷಯಗಳನ್ನು ಪರ್ವತ ಪ್ರಸಂಗದಲ್ಲಿ ಕಾಣುತ್ತೇವೆ. ಯೇಸು ಹೇಳಿದ್ದೇನೆಂದರೆ, "ಆದರೆ ಪ್ರಾರ್ಥನೆ ಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೆ ಸಮ್ಮಸುಮ್ಮನೆ ಹೇಳಬೇಡ" (ಮತ್ತಾಯ 6:7ಎ); "ಇದಲ್ಲದೆ ನೀವು ಉಪವಾಸ ಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ" (ಮತ್ತಾಯ 6:16ಎ).

(3) ಆಚರಣೆಯ ಕುರಿತಾಗಿ, ಕೆಲವು ವಿಷಯಗಳಲ್ಲಿ ದೇವರು ತನ್ನದೇ ಆದ ಆಯ್ಕೆಯನ್ನು ಮಾಡಿದ್ದಾರೆ, ನಾವು ಆ ಆಯ್ಕೆಯನ್ನೆ ಪಾಲಿಸಬೇಕು. ಈ ನಿಯಮವು ಸತ್ಯವಾಗಿದ್ದರೆ, ದೇವರ ಆಯ್ಕೆಯು ಇದಕ್ಕಿಂತಲೂ ಅಗ್ರಸ್ಥಾನದಲ್ಲಿರುವದಿಲ್ಲ. ಇಸ್ರಾಯೇಲ್ಯರ ಧಾರ್ಮಿಕ ಕೆಲಸಗಳಿಗಾಗಿ ದೇವರು ಇಸ್ರಾಯೇಲ್ಯರ ಹನ್ನೆರಡು ಕುಲಗಳಿಂದ, ಲೇವಿಯ ಕುಲವನ್ನು ಆರಿಸಿಕೊಂಡನು (ಅರಣ್ಯಕಾಂಡ 1:50). ದೇವ ಸನ್ನಿಧಿಯಲ್ಲಿ, ಇನ್ನಿತರ ಕುಲದರು ಸೇವೆ ಮಾಡಲು ಅಸಾಧ್ಯವಾಯಿತು.

ಧರ್ಮಶಾಸ್ತ್ರದಲ್ಲಿ, ದೇವರು ತನ್ನ ಆಯ್ಕೆಯನ್ನು ತಿಳಿಸಿರುವನು, ಒಂದು ವೇಳೆ ಧರ್ಮಶಾಸ್ತ್ರವು ಪ್ರಕ್ರಿಯೆಯಲ್ಲಿದಿದ್ದರೆ, ಯೇಸು ಸಹ ಯಾಜಕನಾಗಲು ಅಸಾಧ್ಯವಾಗುತ್ತಿತ್ತು, ಯೇಸುವನ್ನು ದೇವರು ಯಾಜಕನನ್ನಾಗಿ ಮಾಡುವ ಮೂಲಕ ತನ್ನ ಆಯ್ಕೆಗೆ ವಿರೋಧವಾದದ್ದನ್ನು ಮಾಡಲಿಲ್ಲ (ಯೇಸು ಯುದಾಕುಲದಿಂದ ಬಂದವನು).

ದೇವರು ಯಾವ ರೀತಿಯಲ್ಲಿ ಯೇಸುವನ್ನು ಯಾಜಕನನ್ನಾಗಿ ಮಾಡಿದನು ಎಂದು ಇಬ್ರಿಯ ಬರಹಗಾರನು ತಿಳಿಸಿರುವನು,

> ಯಾಜಕತ್ವವು ಬೇರೆಯಾದರೆ ಧರ್ಮಶಾಸ್ತ್ರವು ಕೂಡ ಬೇರೆಯಾಗುವದು ಅಗತ್ಯ. ಮೇಲ್ಕಂಡ ಮಾತು ಯಾವಾತನ ವಿಷಯದಲ್ಲಿ ಹೇಳಿದೆಯೋ ಆತನು ಬೇರೊಂದು ಕುಲದಲ್ಲಿ ಹುಟ್ಟಿದವನು; ಆ ಕುಲದವರಲ್ಲಿ ಒಬ್ಬರೂ ಯಜ್ಞವೇದಿಯ ಬಳಿಯಲ್ಲಿ ಸೇವೆ ಮಾಡಿದ್ದಿಲ್ಲ. ನಮ್ಮ ಕರ್ತನು ಯೆಹೂದ ಕುಲದಲ್ಲಿ ಜನಿಸಿದವನೆಂಬದು ಪ್ರಸಿದ್ಧವಾಗಿದೆಯಷ್ಟೆ; ಈ ಕುಲದ ವಿಷಯದಲ್ಲಿ ಮೋಶೆಯು ಯಾಜಕರ ಸಂಬಂಧವಾಗಿ ಒಂದು ಮಾತನ್ನಾದರೂ ಹೇಳಲಿಲ್ಲ (ಇಬ್ರಿಯ 7:12-14).

ದೇವರು ನಿರ್ದಿಷ್ಟಪಡಿಸಿರುವದನ್ನೆ, ಆತನು ಆಯ್ಕೆ ಮಾಡುವನು. ಆತನ ಆಯ್ಕೆಯ ಈಡೇರಿಸುವ ವಿಷಯದಲ್ಲಿ ಆತನು ಮೌನ ವಹಿಸುವನು. ದೇವರ ಆಯ್ಕೆಗೆ ವಿರುದ್ಧವಾಗಿ ಏನನ್ನು ಮಾಡಬಾರದು.

(4) ದೇವರ ಆಯ್ಕೆಗೆ ತಕ್ಕಂತೆ, ನಾವು ಮಾಡಲು ಸ್ವತಂತ್ರವನ್ನು ಹೊಂದಿರುವೆವು. ಹಬ್ಬಗಳ ವಿಷಯದಲ್ಲೂ ಮತ್ತು ಆಹಾರದ ಕುರಿತಾಗಿಯೂ ಪೌಲನು ತನ್ನ ವಿವೇಚನೆಯನ್ನು ನೀಡಿರುವನು (ರೋಮಾಪುರ 14:2-6). ಕ್ರೈಸ್ತರು ತಿನ್ನಬೇಕಾದ ಆಹಾರದ ಕುರಿತು, ದೇವರು ನಿರ್ದಿಷ್ಟವಾಗಿ ಏನನ್ನು ತಿಳಿಸಿರುವದಿಲ್ಲ, ನಮಗೆ ಬೇಕಾದದ್ದನ್ನು ಆಯ್ಕೆ ಮಾಡಲು, ನಮಗೆ ಸ್ವತಂತ್ರವಿದೆ.

ಕರ್ತನ ಬೋಜನಕ್ಕೂ ಮತ್ತು ಇತರೆ ಆಚರಣೆಗಳಿಗೂ ಈ ನಿಯಮಗಳು ಅನ್ವಯಿಸುತ್ತವೆ. ಕರ್ತನ ಬೋಜನದ ನಿದರ್ಶನವನ್ನು ತಿಳಿಯೋಣ:

(1) ಕರ್ತನ ಬೋಜನದ ಕಾರ್ಯ ಅಪ್ಪಣೆಯಾಗಿದೆ (1 ಕೊರಿಂಥ 11:23-26), ಆದುದರಿಂದ ಅದನ್ನು ಅನುಸರಿಸಬೇಕು.

(2) ವಿಗ್ರಹಗಳಿಗೆ ನೈವೇದ್ಯ ಮಾಡಿದ್ದನ್ನು ತಿನ್ನಬಾರದು (1 ಕೊರಿಂಥ 10:19-21) ಅದನ್ನು ಅನುಸರಿಸಬಾರದು. ಸೈತಾನನ ಹಾಗು ಕರ್ತನ ಪಾತ್ರೆಯಲ್ಲೂ ಪಾಲುಗಾರರಾಗಬಾರದು.

(3) ಯೇಸು ಕ್ರಿಸ್ತನು ರೊಟ್ಟಿಯನ್ನು ಹಾಗು ದ್ರಾಕ್ಷೆರಸವನ್ನು ಆಯ್ದುಕೊಂಡನು (ಮತ್ತಾಯ 26:26-29). ಅದರ ಜೊತೆಯಲ್ಲಿ ಇತರೆ ಪಾನ ಅಥವಾ ಆಹಾರವನ್ನು ತಿಳಿಸಲಿಲ್ಲ, ಆದುದರಿಂದ ನಾವು ಮಾಂಸವನ್ನಾಗಲೀ, ಅಥವಾ ಬೆಣ್ಣೆಯನ್ನಾಗಲೀ ರೊಟ್ಟಿಯ ಸಂಗಡ ಬೆರಸಬಾರದು.

(4) ಪಾತ್ರೆಯ ವಿಷಯದಲ್ಲಿ ಯಾವುದೇ ನಿಯಮವನ್ನು ನೀಡಿರುವದಿಲ್ಲ, ಮತ್ತು ಪಾತ್ರೆಯನ್ನು ಯಾವ ವಸ್ತುವಿನಿಂದ ತಯಾರಿಸಬೇಕೆಂದು ತಿಳಿಸಲಾಗಿಲ್ಲ, ಅದರಲ್ಲಿರುವದನ್ನು ಯಾವ ರೀತಿ ಹಂಚಬೇಕು ಎಂದು ತಿಳಿಸಿರುವದಿಲ್ಲ. ಈ ವಿಷಯದಲ್ಲಿ ಕ್ರೈಸ್ತರಿಗೆ ಸ್ವತಂತ್ರವುಂಟು.

## ಅಧಿಕಾರದ ಮೂಲ

### ಪರಲೋಕದಿಂದಲೋ ಅಥವಾ ಮನುಷ್ಯರಿಂದಲೋ?

ಧಾರ್ಮಿಕ ಆಚರಣೆಗಳು ಪರಲೋಕದಿಂದ ಅಥವಾ ಮನುಷ್ಯರಿಂದ ಮಾತ್ರ ಬರುತ್ತದೆ.

ದೇವರಿಂದ ಅಥವಾ ಸೈತಾನನಿಂದ ಪ್ರಭಾವಿತರಾದ ಮನುಷ್ಯರಿಂದ ಬರುತ್ತದೆ (2 ಕೊರಿಂಥ 11:13-15). ಯೇಸು ಯೆಹೂದ್ಯರಿಗೆ, "ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ಯೋಹಾನನಿಗೆ ಎಲ್ಲಿಂದ ಬಂತು ಅದು ಪರಲೋಕದಿಂದ ಬಂದಿತೋ ಅಥವಾ ಮನುಷ್ಯರಿಂದ ಬಂದಿತೋ?" ಎಂದು ಕೇಳಿದನು (ಮತ್ತಾಯ 21:25; ಮಾರ್ಕ 11:30; ಲೂಕ 20:4). ಪ್ರತಿಯೊಂದು ಧಾರ್ಮಿಕ ಆಚರಣೆಯನ್ನು ಈ ರೀತಿಯಾಗಿ ಪ್ರಶ್ನಿಸಬೇಕು. ಅದು ಪರಲೋಕ ದಿಂದ ಬಂದಿರುವುದಾದರೆ - ಅಂದರೆ, ಅದು ಬೈಬಲಿನಲ್ಲಿ ಪ್ರಕಟಿಸಲಾಗಿದ್ದರೆ, ದೇವರು ಮಾಡಿರುವ ಆಯ್ಕೆಯನ್ನೇ ಮನುಷ್ಯರು ಆಯ್ಕೆ ಮಾಡುವುದಾದರೆ, ಅದು ದೇವರಿಂದ ಮಂಜೂರಾಗಿರುವದಿಲ್ಲ.

ದೇವರ ಆಜ್ಞೆಗಳನ್ನು ಇಸ್ರಾಯೇಲ್ಯರು ತಮ್ಮ ಅಂಗಿಗಳ ಮೇಲೆ ಬರೆದುಕೊಳ್ಳ ಬೇಕು ಎಂದು ದೇವರು ಆದೇಶಿಸಿದ್ದನು. ನಂತರ, ಅದರ ಉದ್ದೇಶವನ್ನು ತಿಳಿಸಿದನು:

> ಆ ಗೊಂಡೆಗಳ ಉಪಯೋಗವೇನಂದರೆ - ನೀವು ಅವುಗಳನ್ನು ನೋಡು ವಾಗ ಯೆಹೋವನ ಆಜ್ಞೆಗಳನ್ನೆಲ್ಲಾ ನೆನಪಿಗೆ ತಂದುಕೊಂಡು ನಡಿಸಬೇಕು, ಮತ್ತು ನೀವು ಪೂರ್ವದಲ್ಲಿ ನನಗೆ ದ್ರೋಹಿಗಳಾಗಿ ಮನಸ್ಸಿಗೂ ಕಣ್ಣಿಗೂ ತೋರಿದಂತೆ ದಾರಿ ತಪ್ಪಿ ನಡೆದ ಪ್ರಕಾರ ಇನ್ನು ನಡೆಯದೆ ನನ್ನ ಆಜ್ಞೆಗಳನ್ನೇ ಲಕ್ಷಿಸಿ ಅನುಸರಿಸಿ ನಿಮ್ಮ ದೇವರಿಗೇ ಪ್ರತಿಷ್ಠಿತರಾಗಿರಬೇಕೆಂಬುದೇ. ನಾನು ನಿಮ್ಮ ದೇವರಾಗುವದಕ್ಕೆ ನಿಮ್ಮನ್ನು ಐಗುಪ್ತದೇಶದೊಳಗಿಂದ ಬರಮಾಡಿದ ನಿಮ್ಮ ದೇವರಾದ ಯೆಹೋವನು (ಅರಣ್ಯಕಾಂಡ 15:39, 40).

ಈ ಬೋಧನೆಯ ವ್ಯಾಖ್ಯಾನವನ್ನು ಸಕರಾತ್ಮಕವಾಗಿಯೂ ನಕರಾತ್ಮಕವಾಗಿಯೂ: ತಿಳಿಸಲಾಗಿದೆ ಇಸ್ರಾಯೇಲ್ಯರು ದೇವರ ಸಕಲ ಆಜ್ಞೆಗಳನ್ನು ಪಾಲಿಸಬೇಕಿತ್ತೇ ವಿನಃ ತಮ್ಮ ಹೃದಯಕ್ಕೂ ಹಾಗೂ ಕಣ್ಣಿಗೂ ತೋಚಿದ್ದನ್ನು ಮಾಡಬಾರದಿತ್ತು.

ಪ್ರಾಪಂಚಿಕ ದೃಷ್ಟಿಯಲ್ಲಿ ಉಪದೇಶ ಅಥವಾ ಆಚರಣೆಗಳು ಸರಿ ಎಂಬುದಾಗಿ ಕಾಣಿಸಿದರೂ ಅದರ ಅಂತ್ಯ ಮರಣವೇ (ಜ್ಞಾನೋಕ್ತಿ 14:12). ದೇವರ ವಾಕ್ಯಕ್ಕೆ ಅನುಗುಣ ವಾಗಿ ಮಾತನಾಡದೇ ಇರುವವರು ವಾಕ್ಯದ ಬೆಳಕನ್ನು ಹೊಂದಿರುವದಿಲ್ಲ (ಯೆಶಾಯ 8:20 ನೋಡಿ). ಮನುಷ್ಯನ ಮಾರ್ಗಗಳು ದೇವರ ಮಾರ್ಗಗಳಲ್ಲ (ಯೆಶಾಯ 55:8, 9), ಮನುಷ್ಯನ ಮಾರ್ಗವು ಅವನಲ್ಲಿರುವದಿಲ್ಲ (ಯೆರೆಮೀಯ 10:23) ಹೃದಯವು ಮೋಸಕರ ವಾದದ್ದು (ಯೆರೆಮೀಯ 17:9); ಆದುದರಿಂದ, ತನ್ನ ಹೃದಯದಲ್ಲಿ ಭರವಸವಿಡುವ ವ್ಯಕ್ತಿಯು ಮೂರ್ಖನಾಗಿದ್ದಾನೆ (ಜ್ಞಾನೋಕ್ತಿ 28:26).

ನ್ಯಾಯಸ್ಥಾಪಕರ ದಿವಸಗಳಲ್ಲಿದ್ದ ಇಸ್ರಾಯೇಲ್ಯರ ಪಾಪವೇನೆಂದರೆ, ಪ್ರತಿಯೊಬ್ಬನು ತನ್ನ ಕಣ್ಣಿಗೆ ತೋಚುವಂತ ರೀತಿಯಲ್ಲಿ ಮಾಡುತ್ತಿದ್ದನು (ನ್ಯಾಯಸ್ಥಾಪಕ 17:6; 21:25). ದೇವರ ಮಾರ್ಗವನ್ನು ತೊರೆದು ಹೋದವರ ಕುರಿತಾಗಿ ಪೇತ್ರನು ಬರೆದು, "ಇವರು ನೀಟಾದ ಮಾರ್ಗವನ್ನು" ಬಿಟ್ಟವರು ಎಂದು ಹೇಳಿದ್ದಾನೆ (2 ಪೇತ್ರ 2:15). ಆತನ ದೃಷ್ಟಿಗೆ ಸರಿಯಾದದ್ದನ್ನೆ ಮಾಡಬೇಕೆಂದು ಕರ್ತನು ಬಯಸುತ್ತಾನೆ (ಧರ್ಮೋಪದೇಶಕಾಂಡ 13:18).

ಇಸ್ರಾಯೇಲ್ಯರು ಅನ್ಯರ ಆಚರಣೆಗಳನ್ನು ಅನುಸರಿಸದೇ ಆತನ ಉಪದೇಶ ಗಳನ್ನು ಅನುಸರಿಸಬೇಕೆಂದು ದೇವರು ಅವರನ್ನು ಎಚ್ಚರಿಸಿದನು.

> ನೀವು ವಾಸವಾಗಿದ್ದ ಐಗುಪ್ತ ದೇಶದ ಆಚಾರಗಳನ್ನು ಅನುಸರಿಸಬಾರದು; ನಾನು ನಿಮ್ಮನ್ನು ಬರಮಾಡುವ ಕಾನಾನ್ ದೇಶದ ಆಚರಣೆಗಳನ್ನೂ ನೀವು ಅನುಸರಿಸಬಾರದು; ಅವರಲ್ಲಿರುವ ನಿಯಮಗಳಿಗೆ ನೀವು ಒಳಗಾಗಬಾರದು. ಯೆಹೋ

> ವನೆಂಬ ನಾನೇ ನಿಮ್ಮ ದೇವರಾಗಿರುವದರಿಂದ ನನ್ನ ನಿರ್ಣಯಗಳ ಪ್ರಕಾರವೇ ನೀವು ನಡೆಯಬೇಕು, ನನ್ನ ವಿಧಿಗಳನ್ನು ಅನುಸರಿಸಬೇಕು (ಯಾಜಕಕಾಂಡ 18:3, 4).

> ನಾನು ನಿಮ್ಮ ಎದುರಿನಿಂದ ಹೊರಡಿಸುವ ಜನಾಂಗದ ಆಚಾರಗಳನ್ನು ನೀವು ಅನುಸರಿಸಬಾರದು; ಅವರು ಈ ದುರಾಚಾರಗಳನ್ನೆಲ್ಲಾ ನಡಿಸಿದದರಿಂದ ನನಗೆ ಹೇಸಿಗೆಯಾದರು (ಯಾಜಕಕಾಂಡ 20:23).

**ದೇವರಿಂದಲೋ ಅಥವಾ ಸೈತಾನನಿಂದಲೋ?**

ಯೆಹೂದ್ಯರ ಕುರಿತಾಗಿ ಯೇಸು ಹೇಳಿದ್ದೇನೆಂದರೆ,

> ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಾನು ಸಾರಾವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ (ಯೋಹಾನ 8:44).

ಸೈತಾನನು ಹವ್ವಳನ್ನು ವಂಚಿಸಿದನು (ಆದಿಕಾಂಡ 3:1-4; 2 ಕೊರಿಂಥ 11:3; 1 ತಿಮೊಥೆ 2:14), ಮತ್ತು ಎಲುಮನು ಸೈತಾನನಿಂದ ಪ್ರಭಾವಿತನಾಗಿ ಪೌಲನ ಉಪದೇಶವನ್ನು ಹಾಳುಮಾಡಿದನು (ಅಪೊಸ್ತಲರಕೃತ್ಯಗಳು 13:8-10). ಸೈತಾನನಿಂದ ಪ್ರಭಾವಿತರಾದವರೇ ಸತ್ಯದಿಂದ ದೂರವಾಗುತ್ತಾರೆ (1 ತಿಮೊಥೆ 4:1, 2).

## ಅಧಿಕಾರದ ಕುರಿತ ನಿದರ್ಶನಗಳು

ಯೇಸುವಿನ ಸೇವೆಯ ಕಾಲದಲ್ಲಿ ಜನರಿಗೆ ಆತನು ವಿವಿಧವಾದ ಮಾರ್ಗದರ್ಶನವನ್ನು ನೀಡಿದನು. ಪ್ರತಿಯೊಂದು ಆಜ್ಞೆಗೂ ವಿಧೇಯತೆಯ ಅಗತ್ಯವಿತ್ತು:

- "... ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" (ಮತ್ತಾಯ 9:6ಬಿ).
- "... ಸಮುದ್ರಕ್ಕೆ ಹೋಗಿ ಗಾಳವನ್ನು ಹಾಕು ಮೊದಲನೆಯದಾಗಿ ಮೀನಿನ ಬಾಯಿಯಲ್ಲಿ ದೊರಕುವ ಹಣವನ್ನು ತೆಗೆದುಕೊಂಡು; ... ಅವರಿಗೆ ನೀಡು ಅದು ನನಗಾಗಿಯೂ ಮತ್ತು ನಿನಗಾಗಿಯು" (ಮತ್ತಾಯ 17:27).
- "ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ ... ಹೊದಕೂಡಲೇ ಅಲ್ಲಿ ಕಟ್ಟಿರುವ ಕತ್ತೆಯನ್ನು ಅದರ ಕೂಡ ಇರುವ ಮರಿಯನ್ನು ಕಾಣುವಿರಿ ಅವುಗಳನ್ನು ಬಿಚ್ಚಿ ನನ್ನ ಹತ್ತಿರಕ್ಕೆ ಹಿಡುಕೊಂಡು ಬನ್ನಿರಿ" (ಮತ್ತಾಯ 21:2).
- "ಆಳವಾದ ಸ್ಥಳಕ್ಕೆ ದೋಣಿಯನ್ನು ನಡಿಸಿ ಮೀನು ಬೇಟೆಗಾಗಿ ನಿಮ್ಮ ಬಲೆಗಳನ್ನು ಹಾಕಿರಿ ಎಂದು ಹೇಳಿದನು ..." (ಲೂಕ 5:4ಬಿ).
- "... ಆಗ ಆತನು ಅವನಿಗೆ ಹೋಗಿ, ಯಾಜಕನಿಗೆ ಮೈ ತೋರಿಸಿ ನೇಮಕ ಮಾಡಿರುವದನ್ನು ಅರ್ಪಿಸು ..." (ಲೂಕ 5:14).

ಯೇಸುವಿನಿಂದ ಆಶೀರ್ವಾದವನ್ನಾಗಲಿ, ಅಥವಾ ವಾಗ್ದಾನವನ್ನಾಗಲಿ ಸ್ವೀಕರಿಸಲು, ಒಬ್ಬ ವ್ಯಕ್ತಿಯು ಆತನು ಹೇಳಿರುವದನ್ನೇ ಮಾಡಬೇಕು. ಅದಕ್ಕೆ ತದ್ವಿರುದ್ಧವಾದದ್ದನ್ನು ಮಾಡುವದಾದರೆ ಅವನು ಆತನಿಗೆ ವಿಧೇಯನಾಗಿರುವದಿಲ್ಲವೆಂಬ ಸೂಚನೆಯಾಗಿರುತ್ತದೆ.

**ಮತ್ತಾಯ 28:20**

ಯೇಸು ಈ ಭೂಲೋಕವನ್ನು ಬಿಟ್ಟು ಹೋಗುವದಕ್ಕಿಂತ ಮೊದಲು, ತನ್ನ ಶಿಷ್ಯರು ದೀಕ್ಷಾಸ್ನಾನ ಮಾಡಿಸುವ ಸಕಲ ಜನಾಂಗದವರಿಗೆ, "ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಮಾಡಿರಿ" ಅಂದನು (ಮತ್ತಾಯ 28:19, 20ಎ). ಸಭೆಯ ಪ್ರಾರಂಭದ ದಿವಸಗಳಲ್ಲಿ ಅವರಿಂದ ದೀಕ್ಷಾಸ್ನಾನ ಪಡೆದವರಿಗೆ ಈ ಕಾರ್ಯವನ್ನು ಉಪದೇಶಿಸಿದರು, "ಅವರು ಅಪೋಸ್ತಲರ ಬೋಧನೆಯಲ್ಲಿ ಮುಂದುವರಿದರು" (ಅಪೊಸ್ತಲರಕೃತ್ಯಗಳು 2:42ಎ).

"ನಾನು ಆಜ್ಞಾಪಿಸಿದ್ದನ್ನು ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಿಸಿರಿ" ಅಂದರೆ ಈ ಕೆಳಗಿನ ಅಂಶಗಳನ್ನು ಅವರಿಗೆ ಬೋಧಿಸಬೇಕಿತ್ತು:

- ಯೇಸುವಿನ ಆಜ್ಞೆ*ಗಳನ್ನು* ಚಾಚೂ ತಪ್ಪದೆ ಈಡೇರಿಸಬೇಕು.
- ಆತನ ಆಜ್ಞೆಯನ್ನು ಮೀರುವುದು ಅಥವಾ ಮಿತಿಗೊಳಿಸುವದನ್ನು *ಮಾಡಬಾರದು.*
- ಆತನ ಆಜ್ಞೆ*ಗಳನ್ನು* ಬದಲಾಯಿಸದೆ ಇರಬೇಕು.
- ಆತನ ಆಜ್ಞೆಗಳನ್ನೆ *ಪಾಲಿಸ*ಬೇಕು.

**ಮತ್ತಾಯ 15:7-9; ಮಾರ್ಕ 7:7-13**

ಮತ್ತಾಯ 15:7-9ರಲ್ಲಿ, ಮನುಷ್ಯರ ಸಂಪ್ರದಾಯವನ್ನು ಅವರ ಆಜ್ಞೆಗಳನ್ನು ಪಾಲಿಸುವದನ್ನು ಯೇಸು ಖಂಡಿಸಿರುವನು. ಆತನು ತನ್ನ ಅನುಯಾಯಿಗಳಿಗೆ ಒಂದು ಲೆಕ್ಕಾಚಾರವನ್ನು ನೀಡಿರುವನು, ಅಂದರೆ ನಮ್ಮ ಆಚರಣೆಯು, ಆತನ ವಿಧಿಗಳಿಗೆ ನಿಯಮಿತ ವಾಗಿರಬೇಕು ಎಂಬ ಅರ್ಥವಾಗದೆ - ಆರಾಧನೆಯ ವಿಷಯವಾಗಿ ಆತನು ತಿಳಿಸಿರುವ ಸತ್ಯವನ್ನು ಹೊರತುಪಡಿಸಿ - ಮನುಷ್ಯನ ಬೋಧನೆಯಲ್ಲಿ ಅವುಗಳನ್ನು ತಿಳಿಯುವುದಾದರೆ - ಅದು ಅಪ್ರಯೋಜಕ ಮತ್ತು ಯೋಗ್ಯವಲ್ಲದ್ದು ಆಗಿರುತ್ತದೆ, ಅದನ್ನು ಅನುಸರಣೆಗೆ ತರಲು ಯೋಗ್ಯವಾಗಿರುವದಿಲ್ಲ.

ಯೆಶಾಯ 29:13ರಲ್ಲಿರುವ ಆಲೋಚನೆಯನ್ನು, ಯೇಸು ತಿಳಿಸಿರುವನು, "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿ ಸುವುದು ವ್ಯರ್ಥ ಎಂಬದೇ" (ಮಾರ್ಕ 7:7). ಇಸ್ರಾಯೇಲ್ಯರು ದೇವರ ವಾಕ್ಯದಿಂದ ದೂರ ಹೋದಂಥ ಆತ್ಮೀಕ ಕುರುಡುತನವನ್ನು ಯೆಶಾಯನು ತಿಳಿಸಿರುವನು. ಆ ವಾಕ್ಯದ ಪ್ರಕಟನೆಗಳನ್ನು ಕೇವಲ ಮುದ್ರೆ ಮಾಡಿದವುಗಳು, ಮತ್ತು ಅವುಗಳು ವಿದ್ಯಾವಂತರಿಗಾಗಿ, ಮತ್ತು ಅವಿದ್ಯಾವಂತರಿಗೆ ಸಲ್ಲದು ಎಂದು ತಿಳಿದಿದ್ದರು (ಯೆಶಾಯ 29:11, 12). ಅವರು ದೇವರ ತಿಳುವಳಿಕೆಯನ್ನು ಹೊಂದದೆ ಇದ್ದದ್ದರಿಂದ, ತಮ್ಮ ಇಚ್ಛಾನುಸಾರ ಮತ್ತು ಅವರ ಸ್ವಂತ ನಿಯಮಾನುಸಾರ ದೇವರನ್ನು ಸೇವಿಸಲು ಮುಂದಾಗಿದ್ದರು. ಈ ವಿಧವಾದ ಸ್ವಭಾವದ ಆರಾಧನೆಯನ್ನು ಯೇಸು ತಿರಸ್ಕರಿಸಿರುವನು.

ಯೇಸು ಯೆಹೂದ್ಯರಿಗೆ ತಿಳಿಸಿ, "ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ" ಅಂದನು (ಮಾರ್ಕ 7:8, 9ಬಿ). ಆತನು ತಿರಿಗಿ, "ಹೀಗೆ ನೀವು ಕಲಿಸುತ್ತಾ ಬಂದಿರುವ ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕ ಮಾಡುತ್ತೀರಿ" ಅಂದನು (ಮಾರ್ಕ 7:13ಎ).

**ಯೋಹಾನ 4:20-24**

ಯೇಸುವನ್ನು ಪ್ರವಾದಿ ಎಂದು ತಿಳಿದು, ಸಮಾರ್ಯದ ಸ್ತ್ರೀಯು ಯಾಕೋಬನ ಬಾವಿಯ ಬಳಿಯಲ್ಲಿ ಆರಾಧನೆಯ ಕುರಿತು ಒಂದು ಪ್ರಶ್ನೆಯನ್ನು ಕೇಳಿದಳು. ಅದು ದೇವರ

ಇರುವಿಕೆಯ ಪ್ರಶ್ನೆಯಾಗಿರದೆ, ಯಾವ ದೇವರನ್ನು ಆರಾಧಿಸಬೇಕೆಂಬ ಪ್ರಶ್ನೆಯಾಗಿತ್ತು, ಆರಾಧನೆಯ ಅಗತ್ಯತೆ ಇದ್ದರೂ ಸರಿಯೇ ಅಥವಾ ಇಲ್ಲದಿದ್ದರೂ ಸರಿಯೇ, ಆರಾಧನೆಯಲ್ಲಿ ಏನನ್ನು ಉಪಯೋಗಿಸಬಹುದು ಅಥವಾ ಉಪಯೋಗಿಸಬಾರದು, ಅಥವಾ ಅದು ನಿಯಮಕ್ಕೆ ಅನುಗುಣವಾಗಿರಬೇಕೆ ಅಥವಾ ಇರಬಾರದೆ ಎಂಬ ಪ್ರಶ್ನೆಯಾಗಿರಲಿಲ್ಲ. ಆಕೆ ದೇವರನ್ನು ನಂಬಿ, ಆತನನ್ನೇ ಆರಾಧಿಸಬೇಕೆಂದು ನಂಬಿದ್ದಳು. ಆರಾಧನೆಯು ಸರಿಯಾದ ಕ್ರಮದಲ್ಲಿ ನಡೆಯಬೇಕು ಎಂದು ನಂಬಿದ್ದಳು, ಅದು ದೇವರ ಚಿತ್ತದಂತೆ ಇರಬೇಕೆಂದು ನಂಬಿದ್ದಳು. ಆರಾಧನೆಯ ಕುರಿತ ಕೆಲವು ನಿಯಮಗಳನ್ನು ಆಕೆಯು ಅರಿತಿದ್ದಳು, ಅದು ಕ್ರಮವುಳ್ಳದ್ದು ಎಂದು ತಿಳಿದಿದ್ದಳು. ಆಕೆಯು ಆರಾಧನೆಯ ನಿರ್ದಿಷ್ಟವಾದ ಸ್ಥಳವನ್ನು ತಿಳಿಯಬಯಸಿದಳು.

ಆರಾಧನೆಯಲ್ಲಿ ನಡೆಯುವ ಸಕಲ ವಿಧವಾದ ಪ್ರಯತ್ನಗಳನ್ನು ದೇವರು ಸ್ವೀಕರಿಸುವದಿಲ್ಲವೆಂದು ಯೇಸು ಉತ್ತರಿಸಿದನು. ಸಮಾರ್ಯದವರು ಆರಾಧನೆ ಮಾಡಿದರು, ಅವರ ಪ್ರಯತ್ನವು ದೇವರನ್ನು ಮೆಚ್ಚಿಸುವದಿಲ್ಲ. ಮಾಹಿತಿ ಇಲ್ಲದ ಆರಾಧನೆಯು ಒಪ್ಪಬಹುದಾದ ಆರಾಧನೆಯಲ್ಲ. ಆರಾಧನೆಯ ಕುರಿತು ಸಮಾರ್ಯದವರು ಅರಿಯದವರು ಎಂದು ಯೇಸು ಆಕೆಗೆ ಹೇಳಿದನು.

ಯೆಹೂದ್ಯರ ಕ್ರಮ ಮಾತ್ರ, ಸರಿಯಾದ ಕ್ರಮವಾಗಿತ್ತು, ಮೆಸ್ಸೀಯನಿಂದ ಬರಬಹುದಾದ ರಕ್ಷಣೆಯು, ಯೆಹೊದ್ಯರಿಂದ ಬರುತ್ತದೆ ಅಂದನು. ಹಳೆ ಮತ್ತು ಹೊಸ ಒಡಂಬಡಿಕೆಯಲ್ಲಿ ಇರುವ ಪ್ರಕಟನೆಗಳನ್ನು ಯೆಹೂದ್ಯರಿಗೆ ತಿಳಿಸಲಾಗಿದೆ. ಗ್ರಂಥಗಳನ್ನು ಯೆಹೂದ್ಯರಿಗೆ ವಹಿಸಿಕೊಡಲಾಗಿದೆ (ರೋಮಾಪುರ 3:2).

ಸರಿಯೋ, ತಪ್ಪೋ, ಆರಾಧನೆಯು, ರಕ್ಷಣೆಯ ಮೇಲೆ ಪರಿಣಾಮ ಬೀರುತ್ತದೆ ರಕ್ಷಣೆಯನ್ನು ಹೇಗೆ ಹೊಂದಬೇಕು ಅಥವಾ ಪಾಪಕ್ಷಮೆಯನ್ನು ಹೊಂದುವ ಕುರಿತು ಯೇಸು ಆಕೆಯೊಂದಿಗೆ ಚರ್ಚಿಸುತ್ತಿರುವದಿಲ್ಲ, ಆದರೆ ದೇವರನ್ನು ಮೆಚ್ಚಿಸುವ ಆರಾಧನೆಯ ಕುರಿತು ಮಾತನಾಡುತ್ತಿರುವನು. ಇಸ್ರಾಯೇಲ್ಯರಿಗೆ, ಆರಾಧನೆಯ ಕುರಿತು ದೇವರು ನೀಡಿದ್ದ ನಿಯಮಗಳ ಕುರಿತು ಮಾತನಾಡಿದನು.

ದೇವರು ಸರಿಯಾದ ಆರಾಧನೆಯನ್ನು ಮಾತ್ರ ಸ್ವೀಕರಿಸುವನು. ಕ್ರೈಸ್ತರ ಕಾಲದ ಆರಾಧನೆಯನ್ನು ಸತ್ಯದಿಂದಲೂ ಮತ್ತು ಆತ್ಮದಿಂದಲೂ ಸಮರ್ಪಿಸಬೇಕು (ಯೋಹಾನ 4:23, 24). "ಆತ್ಮದಿಂದಲೂ" ಅಂದರೆ, ಆರಾಧನೆಯು ಅಂತರಾತ್ಮದಿಂದ ಬರಬೇಕು. ಬಾಹಿರ ಪ್ರದರ್ಶನವು ಸಾಲದು. ಅಂತರಾಳದಿಂದ ಬಾರದ ಆರಾಧನೆಯು, ಖಾಲಿಯಾದ ಮೊಟ್ಟೆಯಾಗಿರುತ್ತದೆ, ಅದರಲ್ಲಿ ಬಿಳಿಯ ತಿರುಳಾಗಲಿ, ಅಥವಾ ಹಳದಿಯ ತಿರುಳಾಗಲಿ ಇರುವದಿಲ್ಲ. ಗಂಡನ ಹೃದಯವು ಬೇರೆ ಪ್ರಪಂಚದಲ್ಲಿ ಅಥವಾ ಬೇರೆ ಸ್ತ್ರೀಯಲ್ಲಿ ಇಟ್ಟುಕೊಂಡು ಅವನ ಹೆಂಡತಿಗೆ, ನಾನು ನಿನ್ನನ್ನು ಪ್ರೀತಿಸುವೆನು ಎಂದು ಹೇಳುವ ಹಾಗಿರುತ್ತದೆ. "ಸತ್ಯ" ಎಂದರೆ ಧರ್ಮಶಾಸ್ತ್ರದ ಪ್ರಕಾರವಿಲ್ಲದೆ, ಯೇಸುವಿನ ಉಪದೇಶಕ್ಕೆ ಅನುಸಾರವಾದ ಆಚರಣೆಯಾಗಿರುತ್ತದೆ (ಇಬ್ರಿಯ 10:1) ಧರ್ಮಶಾಸ್ತ್ರವು "ನೆರಳಾಗಿದೆ," ಅದನ್ನು ಮೋಶೆಯ ಮೂಲಕ ನೀಡಲಾಯಿತು (ಯೋಹಾನ 1:17). ಯೇಸು ಸತ್ಯವನ್ನು ತಂದನು (ಯೋಹಾನ 1:14; 14:6; ಎಫೆಸ 4:21). ದೇವರ ವಾಕ್ಯದಲ್ಲಿ ಮುಂದುವರಿಯುವವರು ಸತ್ಯವನ್ನು ಅರಿಯುವರು. ಸತ್ಯವನ್ನು ಅರಿತವರು ಯೇಸುವನ್ನು ಆಲಿಸುವರು (ಯೋಹಾನ 8:31, 32; 17:17; 18:37ಬಿ).

ದೇವರ ಬೋಧನೆಗಳು ಸಹ ಬಹು ಪ್ರಾಮುಖ್ಯ ಎಂದು ಯೇಸು ತಿಳಿಸಿರುವನು, "ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗಿರುವನು, ಸ್ವಲ್ಪವಾದದ್ದರಲ್ಲಿ ಅನ್ಯಾಯಗಾರನಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗಿರುವನು" (ಲೂಕ 16:10).

**ಯೋಹಾನ 16:13, 14**

ಪರಿಶುದ್ಧಾತ್ಮನ ಮೂಲಕ, ಯೇಸು ಅಪೊಸ್ತಲರಿಗೂ ಮತ್ತು ಹೊಸ ಒಡಂಬಡಿಕೆಯ ಪ್ರವಾದಿಗಳಿಗೂ ಸಕಲವಿಧವಾದ ಸತ್ಯಗಳನ್ನು ಪ್ರಕಟಿಸಿದನು (ಎಫೆಸ 2:20; 3:3-5). ಇನ್ಯಾವುದೇ ಸತ್ಯದ ಪ್ರಕಟನೆಯಾಗಲೀ ಅಥವಾ ಅದರ ಅಗತ್ಯತೆಯಾಗಲೀ ಇರುವದಿಲ್ಲ,

> ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿ ಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು (ಯೋಹಾನ 16:13, 14).

ಅಪೊಸ್ತಲರು ಸರಿಯಾದ ಸತ್ಯದ ಮಾರ್ಗದಲ್ಲಿ ಮುನ್ನಡೆಯಬೇಕಿತ್ತು, ಯಾಕೆಂದರೆ ಯೇಸು ಅದನ್ನು ಪಸ್ಕ ಹಬ್ಬದ ಬೋಜನದಲ್ಲಿ ತನ್ನವರಿಗೆ ತಿಳಿಸಿರುವ ಸಾಕ್ಷಿ ಇರುತ್ತದೆ. ಆ ಬೋಜನವು ಮುಗಿದ ನಂತರ, ಆತನು ಎದ್ದು ತನ್ನ ಶಿಷ್ಯರ ಕಾಲುಗಳನ್ನು ತೊಳೆಯಲು ಮುಂದಾದನು (ಯೋಹಾನ 13:4, 5); ಈ ಹನ್ನೆರಡು ಜನರು ಮಾತ್ರ ಆತನ ಜೊತೆಯಲ್ಲಿ ಇದ್ದರು (ಮತ್ತಾಯ 26:20; ಮಾರ್ಕ 14:17; ಲೂಕ 22:14). ಯೇಸು ಅವರಿಗೆ, "ನಾನು ನಿಮ್ಮೊಂದಿಗಿರುವಾಗ ಈ ವಿಷಯವನ್ನು ತಿಳಿಸಿರುವೆನು" (ಯೋಹಾನ 14:25); "ನೀವು ಮೊದಲಿನಿಂದ ನನ್ನ ಸಂಗಡ ಇದ್ದ ಕಾರಣ ನೀವು ಸಾಕ್ಷಿಗಳಾಗಿದ್ದೀರಿ" (ಯೋಹಾನ 15:27); "ಆ ಕಾಲ ಬಂದಾಗ ಆತನು ನಮಗೆ ಇಂಥಿಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ" (ಯೋಹಾನ 16:4ಬಿ).

**ರೋಮಾಪುರ 10:1-3**

ನಾವು ಆತನ ಮಾತಿಗೆ ಪ್ರತಿಕ್ರಿಯೆ ನೀಡಿ, ಎಚ್ಚರದಿಂದ ಆತನ ಉಪದೇಶಗಳನ್ನು ಅನುಸರಿಸಬೇಕೆಂದು ಬಯಸುತ್ತಾನೆ. ನಮ್ಮ ಸ್ವಂತ ಇಚ್ಚೆಯ ಮೇರೆಗೆ ನಮ್ಮನ್ನು ಬಿಡುವದಿಲ್ಲ. ನಾವು ದೇವರ ಚಿತ್ತವನ್ನು ತಿಳಿಯದೆ ಮಾಡುವುದಾದರೆ, ನಾವು ಏನನ್ನು ತಿಳಿಯದೆ ಮಾಡುವವರಾಗಿದ್ದೇವೆ. ಇಸ್ರಾಯೇಲ್ಯರು ಇದನ್ನೇ ಮಾಡಿದರು, *ಅವರು ತಿಳುವಳಿಕೆಯನ್ನು* ಹೊಂದದೆ ಇದ್ದದ್ದರಿಂದ, ಪೌಲನು ಅವರಿಗಾಗಿ ಪ್ರಾರ್ಥಿಸಿದನು:

> ದೇವರಲ್ಲಿ ಆಸಕ್ತರಾಗಿದ್ದಾರೆಂದು ನಾನು ಅವರ ವಿಷಯದಲ್ಲಿ ಸಾಕ್ಷಿಕೊಡುತ್ತೇನೆ; ಆದರೂ ಅವರ ಆಸಕ್ತಿ ಜ್ಞಾನಾನುಸಾರವಾದದ್ದಲ್ಲ. ಅವರು ದೇವರಿಂದ ದೊರಕುವ ನೀತಿಯನ್ನರಿಯದೆ ಸ್ವನೀತಿಯನ್ನೇ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಾ ಇದ್ದದರಿಂದ ದೇವರ ನೀತಿಗೆ ಅಧೀನರಾಗಲಿಲ್ಲ (ರೋಮಾಪುರ 10:2, 3).

ಆತನ ಪ್ರಕಟನೆಯಲ್ಲಿ ಇರುವದನ್ನು ಮಾಡುವುದೇ, ನಾವು ಆತನ ಮಾರ್ಗದಲ್ಲಿ ಇದ್ದೇವೆಂಬ ಸೂಚನೆಯಾಗಿರುತ್ತದೆ.

**2 ಕೊರಿಂಥ 11:3**

ಕೊರಿಂಥದವರು ಕ್ರಿಸ್ತನಿಂದ ದೂರವಾಗುವರು ಎಂಬ ಭಯವನ್ನು ಪೌಲನು ಹೊಂದಿದ್ದನು, ದೇವರ ನಿಯಮಗಳನ್ನು ಕ್ರೈಸ್ತರು ಅನುಸರಿಸುವುದಾದರೆ, ಅವರು ಆತನನ್ನು ತೊರೆದು ಹೋಗಲು ಸಾಧ್ಯವಿರುವದಿಲ್ಲ. ನಮ್ಮ ಒಬ್ಬನೇ ಅಧಿಕಾರವುಳ್ಳ ಕರ್ತನಾದ ಯೇಸುವಿಗೆ ನಂಬಿಗಸ್ತರಾಗಿ ಇರಬೇಕಾದರೆ ನಾವು 2 ಕೊರಿಂಥ 11:3ರಲ್ಲಿರುವ ಯಥಾರ್ಥತ್ವವನ್ನು ಮತ್ತು ಪಾತಿವ್ರತ್ಯವನ್ನು ಹೊಂದಿರಬೇಕು. ಇವೆರಡರಲ್ಲಿ

ನಮ್ಮ ನಂಬಿಕೆಗೆ ಅರ್ಹವಾದ, ಪರಿಶುದ್ಧ ಹಾಗು ನಂಬಿಗಸ್ತಿಕೆಯ ಸಮರ್ಪಣೆಯು ಅಡಕ ವಾಗಿವೆ. ಅವರು ಮತ್ತೊಬ್ಬ "ಕ್ರಿಸ್ತನನ್ನು" ನಂಬುವವರಾಗಿದ್ದರು ಎಂದು ಪೌಲನು ವ್ಯಾಖ್ಯಾನವನ್ನು ಮಾಡಿರುವನು, ಮತ್ತು ಮತ್ತೊಂದು "ಆತ್ಮ"ನನ್ನು ಅಥವಾ ಇನ್ನೊಂದು ಸುವಾರ್ತೆಯನ್ನು (2 ಕೊರಿಂಥ 11:4) ಹಿಡಿದಿರುವರು ಎಂದು ತಿಳಿಸಿದನು. ನಂತರ ಅವನು "ಸುಳ್ಳು ಅಪೊಸ್ತಲರು" ಮೋಸಗಾರರಾದ ಕೆಲಸದವರು ಎಂದು ಸಹ ತಿಳಿಸಿರುವನು (2 ಕೊರಿಂಥ 11:13). ಬೋಧಕನಾದ ಯೇಸುವಿನ ಹೊರತಾಗಿ ಬೇರೆಯಾರನ್ನು ಕ್ರೈಸ್ತರು ಅನುಸರಿಸಬಾರದು ಎಂದು ತಿಳಿಸಿದನು, ಪರಿಶುದ್ಧಾತ್ಮನನ್ನು ಮತ್ತು ಅವರು ಈಗಾಗಲೇ ಸ್ವೀಕರಿಸಿದ್ದ ಸುವಾರ್ತೆಯನ್ನು ಮಾತ್ರ ಅನುಸರಿಸಬೇಕೆಂದು ತಿಳಿಸಿದನು.

**ಗಲಾತ್ಯ 1:7, 8**

ಯೇಸುವಿನ ಬೋಧನೆಯು ನಿಯಮಕ್ಕೆ ಬದ್ಧವಾಗಿರುತ್ತದೆ. ಯೇಸುವಿನ ಸುವಾರ್ತೆಯನ್ನು ಮಾತ್ರ ಉಪದೇಶಿಸಬೇಕು. ಸುವಾರ್ತೆ (*euaggelion*, "ಶುಭ ಸಂದೇಶ") ಅಂದರೆ ಮರಣ, ಹೂಣುವಿಕೆ, ಹಾಗೂ ಪುನರುತ್ಥಾನದ ಮಾಹಿತಿಯಾಗಿರುತ್ತದೆ; ಅದಕ್ಕಿಂತಲೂ ಹೆಚ್ಚಿನದನ್ನು ಇದರಲ್ಲಿ ಕಾಣುತ್ತೇವೆ (ಗಲಾತ್ಯ 2:2-5). ಗಲಾತ್ಯ ಪತ್ರಿಕೆಯಲ್ಲಿ ಸುನ್ನತಿ ಅಗತ್ಯವೇ ಅಥವಾ ಅಗತ್ಯವಿಲ್ಲವೆ ಎಂದು ಚರ್ಚಿಸಲಾಗಿದೆ (ಗಲಾತ್ಯ 2:11-14). ಮತ್ತು ಅನ್ಯರ ಸಂಗವು ಯೆಹೂದ್ಯರಿಗೆ ಅಗತ್ಯವೇ ಎಂದು ಚರ್ಚಿಸಲಾಗಿದೆ (ಮತ್ತಾಯ 4:17; ಮಾರ್ಕ 1:15). ಮನುಷ್ಯನ ರಹಸ್ಯಗಳಿಗೆ ತೀರ್ಪಾಗುತ್ತದೆ ಎಂದು ಸುವಾರ್ತೆಯು ತಿಳಿಸುತ್ತದೆ (ರೋಮಾಪುರ 2:16). ಸುವಾರ್ತೆಗೆ ಅನುಗುಣವಾದ ಕ್ರೈಸ್ತ ಜೀವಿತವನ್ನು ಜೀವಿಸಬೇಕು (ಫಿಲಿಪ್ಪಿ 1:27). ಸುವಾರ್ತೆಯಲ್ಲಿ ಕ್ರೈಸ್ತರ ನಿರೀಕ್ಷೆ ಉಂಟು (ಕೊಲೊಸ್ಸೆ 1:23), ಅದರಲ್ಲಿ ಇನ್ನೂ ಅನೇಕ ವಿಧವಾದ ನೈತಿಕತೆಗಳುಂಟು (1 ತಿಮೊಥೆ 1:8-11). ಅದು ಅನೈತಿಕತೆಯನ್ನು ಬೆಳಕಿಗೆ ತರುತ್ತದೆ (2 ತಿಮೊಥೆ 1:10). ಯೇಸುವಿನ ನಿಯಮಾವಳಿಗಳಿಂದ ಸರಿಯುವವನು ತಪ್ಪಿತಸ್ಥನೆ - ಅವನು ಒಂದು ವೇಳೆ ಯೇಸುವಿನ ರಕ್ಷಣೆಯ ಕುರಿತಾಗಿ ತಪ್ಪು ಬೋಧನೆಯನ್ನೆ ಮಾಡಬಹುದು, ರಕ್ಷಣೆಗೆ ಅಗತ್ಯವಿರುವ, ಅಥವಾ ರಕ್ಷಿಸಲ್ಪಟ್ಟವರು ಜೀವಿಸುವ ಕುರಿತು ಬೋಧಿಸಬಹುದು. ದೇವರ ವಾಕ್ಯದ ನಿಯಮಗಳನ್ನು ಉಲ್ಲಂಘನೆ ಮಾಡುವವರು ಶಾಪಗ್ರಸ್ತರು (ಗಲಾತ್ಯ 1:8, 9).

**ಕೊಲೊಸ್ಸೆ 2:18-23**

ತಪ್ಪಾದ ಬೋಧನೆಗಳನ್ನು ಮಾಡುವವರು, ಅವರ ಜ್ಞಾನ ಭರಿತವಾದ ಬೋಧನೆಗಳಿಂದ ತಪ್ಪಾದ ಆಚರಣೆಗೆ ನಮ್ಮನ್ನು ನಡೆಸುವುದಾದರೆ, ಮತ್ತು ಸಭೆಯ ಶಿರಸ್ಸಾದ ಯೇಸುವನ್ನು ಪ್ರಚಾರ ಪಡಿಸದಿದ್ದರೆ, ನಾವು ನಮ್ಮ ಪ್ರತಿಫಲವನ್ನು ಕಳೆದು ಕೊಳ್ಳುತ್ತೇವೆ (ವಚನಗಳು 18, 19). ಪ್ರಾಪಂಚಿಕ ನಿಯಮಗಳಿಗೆ ಕ್ರಿಸ್ತನಲ್ಲಿ ನಾವು ಸಾಯಬೇಕು, ಮನುಷ್ಯನ ಪದ್ಧತಿಗಳಿಗೆ ಒಳಗಾಗಬಾರದು (ವಚನ 20), ಯಾಕೆಂದರೆ ಅದು ಮನುಷ್ಯನ ಆಜ್ಞೆ ಮತ್ತು ಬೋಧನೆಯಾಗಿರುತ್ತದೆ (ವಚನ 22), ಈ ವಿವೇಕವು "ಧರ್ಮದ - ಸ್ವಾರ್ಥ - ಆರಾಧನೆಯನ್ನು" ಒಳಗೊಂಡಿರುತ್ತದೆ ("ಸ್ವಚಿತ್ತದ - ಆರಾಧನೆ", KJV "ಸ್ವಂತತ್ರವನ್ನು - ಮುನ್ನಡೆಸುವ ಆರಾಧನೆ"; NIV; ವಚನ 23).

ಯೇಸುವಿನ ಬೋಧನೆಗಳಿಗೆ ಮಾತ್ರ ನಾವು ಬದ್ಧರಾಗಿರಬೇಕು, ಮನುಷ್ಯನ ತಿಳುವಳಿಕೆಯಿಂದ ಉದ್ಭವಿಸಿದ ತಾಂತ್ರಿಕತೆಗೆ ಒಳಗಾಗಬಾರದು.

**2 ತಿಮೊಥೆ 3:16, 17**

ತಿಮೊಥೆಯು ಹಳೆ ಒಡಂಬಡಿಕೆಯ ಕಾಲದ ವಾಕ್ಯಗಳನ್ನು ಬಲ್ಲವನಾಗಿದ್ದನು

(2 ತಿಮೊಥೆ 3:15); "ಎಲ್ಲಾ ಗ್ರಂಥಗಳ" ಅಂದರೆ ಅದರಲ್ಲಿ ಹಳೇ ಒಡಂಬಡಿಕೆಯು ಸಹ ಅಡಕವಾಗಿದೆ 2 ತಿಮೊಥೆ 3:16. ಇದನ್ನು ವಿಲಿಯಮ್ ಹೆಂಡ್ರಿಕ್‌ಸನ್‌ರವರು ಈ ರೀತಿಯಾಗಿ ವಿವರಿಸಿದ್ದಾರೆ,

> ವಚನ 15ರಲ್ಲಿ ಪೌಲನು "ಪರಿಶುದ್ಧ ಗ್ರಂಥಗಳು" ಎಂದು ತಿಳಿಸಿರುವನು, ವಚನ 16ರಲ್ಲಿ "ದೈವ ಪ್ರೇರಿತವಾದ ಶಾಸ್ತ್ರ" ಎಂದಿರುವನು. ಇಲ್ಲಿ ಹಳೆ ಒಡಂಬಡಿಕೆಗೂ ಮತ್ತು ದೈವೀಕವಾಗಿ ಪ್ರೇರಿತವಾಗಿರುವ ಗ್ರಂಥಗಳ ನಡುವೆ ಇರುವ ವ್ಯತ್ಯಾಸಗಳನ್ನು ತೋರಿ ಸುತ್ತಿರುವನು (ವಚನ 16) ಮುಂದಿನದು, ಹಿಂದಿನದಕ್ಕಿಂತ ಪ್ರಾಮುಖ್ಯವಾಗಿದೆ.[2]

ಹೊಸ ಒಡಂಬಡಿಕೆಯ ಬರವಣಿಗೆಗಳನ್ನು, ಗ್ರಂಥವೆಂದು ಪರಿಗಣಿಸಬೇಕು, ಪೌಲನ ಬರವಣಿಗೆಯ ಕುರಿತಾಗಿ, ಪೇತ್ರನು ಸಹ ತಿಳಿಸಿರುವನು (2 ಪೇತ್ರ 3:16).

"ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ" (2 ತಿಮೊಥೆ 3:16). ಇನ್ಯಾವುದೇ ಗ್ರಂಥಗಳು ಈ ರೀತಿ ಯಾದ ಸಂಪೂರ್ಣತೆಯನ್ನು ಮತ್ತು ಅಧಿಕಾರವನ್ನು ಹೊಂದಿರುವದಿಲ್ಲ.

ಈ ಗ್ರಂಥಗಳ ಮೂಲಕ, "ದೇವರ ಅನುಯಾಯಿಯು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು" (2 ತಿಮೊಥೆ 3:17). ಇದಕ್ಕಿಂತಲೂ ಮಿಗಿಲಾದ ಪ್ರಮಾಣದ ಅಗತ್ಯತೆ ಇರುವದಿಲ್ಲ. ದೇವರೊಂದಿಗಿನ ಸಂಬಂಧದ ಕುರಿತು ಕ್ರೈಸ್ತರು ಗ್ರಂಥಗಳ ಮೂಲಕ ಅರಿಯುವರು. ಇದನ್ನು ಹೊರತುಪಡಿಸಿ, ಇತರೆ ಮೂಲವನ್ನು ಹುಡುಕುವವರು. ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವ ಸತ್ಯವನ್ನು ಅಲ್ಲಗಳೆಯುವರು.

### ತೀತ 1:10-14

ಬೋಧಿಸಬಾರದಂಥಹ ವಿಷಯಗಳನ್ನು ಬೋಧಿಸುತ್ತಿದ್ದ ಮೋಸಗಾರರ ಕುರಿತು ಪೌಲನು ಎಚ್ಚರಿಕೆ ನೀಡಿರುವನು (ವಚನಗಳು 10, 11) ಅವರು ಸ್ವಸ್ಥ ಚಿತ್ತರಾಗಿರಬೇಕು ಎಂದು ಪೌಲನು ಗಂಭೀರ ಎಚ್ಚರಿಕೆಯನ್ನು ನೀಡಿರುವನು (ವಚನ 13), ಸತ್ಯವಾದದ್ದನ್ನು ಶುದ್ಧವಾದದ್ದನ್ನು ಮತ್ತು ನಾಶವಾಗದೆ ಇರುವದನ್ನು ಮಾತ್ರ ಉಪದೇಶಿಸಬೇಕು.

ಮನುಷ್ಯರ ವಿಧಿಗಳನ್ನು ಕಲ್ಪನಾ ಕಥೆಗಳನ್ನು ಬೋಧಿಸಬಾರದು (1:14), ನಮ್ಮ ಬೋಧನೆಯು ದೇವರಿಗೂ ಮತ್ತು ಯೇಸುವಿನಿಂದ ಪ್ರಕಟನೆಗೊಂಡ ಸತ್ಯಕ್ಕೂ ಒಳಪಟ್ಟಿರ ಬೇಕು (ಯೋಹಾನ 1:17; 8:31, 32; 14:6).

### ಇಬ್ರಿಯ 2:10; 12:2

ಯೇಸು ಕ್ರೈಸ್ತ ನಂಬಿಕೆಗೆ "ಮೂಲವಾಗಿದ್ದಾನೆ." ಆ ಮೂಲದ ಉಪದೇಶವನ್ನೆ ಆತನ ಶಿಷ್ಯರು ಪಾಲಿಸಬೇಕು. ಆತನು, "ನಂಬಿಕೆಯ" ಕ್ರೈಸ್ತ ಜೀವಿತವನ್ನು ಪ್ರಾರಂಭಿಸಿದನು ಮತ್ತು ಅದನ್ನು ಪೂರ್ಣಗೊಳಿಸುವವನು ಆಗಿರುವನು (ಇಬ್ರಿಯ 2:3); ಒಂದು ವೇಳೆ ಆಚರಣೆಗಳನ್ನು ಹೊಸ ಒಡಂಬಡಿಕೆಯಲ್ಲಾಗಲೀ ಅಥವಾ ಯೇಸುವಿನ ಬೋಧನೆಗಳಲ್ಲಿ, ತಿಳಿಸದೆ ಇದ್ದರೆ ಆಚರಣೆಗಳಿಗೆ ಯೇಸು ಮೂಲವಾಗಿರುವದಿಲ್ಲ, ಕ್ರೈಸ್ತರು ಆ ಬೋಧನೆಗಳ ಪ್ರಕಟನೆಗಳು ಯಾವಾಗಲು ಹೊಂದಿರುವರು (ಯೂದ 3).

### 2 ಯೋಹಾನ 9

ಯೋಹಾನನು, ಬರೆದು "ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು" (2 ಯೋಹನ

9). ಇದರಲ್ಲಿ ಕ್ರಿಯಾಪದವನ್ನು ಗಮನಿಸುತ್ತೇವೆ. ಯೇಸುವಿನ ಬೋಧನೆಯನ್ನು ವ್ಯತಿರಿಕ್ತ ವಾಗಿ ಅನುಸರಿಸುವವರು ದೇವರನ್ನು ಹೊಂದಿರುವದಿಲ್ಲ. ಅದರಲ್ಲಿ ಮುಂದುವರಿಯುವವರು, ತಂದೆಯನ್ನು ಮತ್ತು ಮಗನನ್ನು ಹೊಂದಿರುವರು.

**ಪ್ರಕಟನೆ 22:18, 19**

ಪ್ರಕಟನೆಯ ಗ್ರಂಥದಲ್ಲಿ ಬರೆದಿರುವ ವಿಷಯಕ್ಕೆ ಸೇರಿಸುವವನನ್ನು ಮತ್ತು ತೆಗೆದು ಹಾಕುವವನನ್ನು ಬೈಬಲ್ ನಿರ್ದಿಷ್ಟವಾಗಿ ಖಂಡಿಸುತ್ತದೆ, ಅದು ಪ್ರಕಟನೆಗೆ ಮಾತ್ರ ಮೀಸ ಲಾಗಿರುತ್ತದೆಯೇ? ಸತ್ಯವೇದಕ್ಕೆ ಸೇರಿಸುವದನ್ನಾಗಲೀ ಅಥವಾ ತೆಗೆಯುವದನ್ನಾಗಲಿ ನಿರಾ ಕರಣೆ ಮಾಡಿರುವದರಿಂದ, ಆ ನಿಯಮವು ಇತರೆ ಪುಸ್ತಕಗಳಿಗೂ ಅನ್ವಹಿಸುತ್ತದೆ? ಪ್ರಕಟನೆ ಪುಸ್ತಕದಲ್ಲಿರುವದೆಲ್ಲವು ಸತ್ಯವಾಗಿದ್ದರೆ, ಇನ್ನುಳಿದ ದೇವರ ಪ್ರಕಟನೆಗಳು ಸಹ ಸತ್ಯವಾದ ವಾಕ್ಯಗಳಾಗಿರುತ್ತವೆ: ಆತನ ಬೋಧನೆಗಳಿಂದ, ಯಾವುದನ್ನು ತೆಗೆದುಹಾಕಬಾರದು.

## ಮುಕ್ತಾಯ

ಯೇಸುವಿನ ಉಪದೇಶವನ್ನು ಉಲ್ಲಂಘಿಸುವವರು, ದೇವರನ್ನು ಹೊಂದಿರುವದಿಲ್ಲ, ಅದರಲ್ಲಿ ನೆಲೆಯಾಗಿರುವವರು ತಂದೆ ಮತ್ತು ಮಗನನ್ನು ಹೊಂದಿರುವರು. ಅದನ್ನು ಒಂದು ವೃತ್ತದ ರೇಖಾ ಚಿತ್ರದಿಂದ ಪುಷ್ಠೀಕರಿಸಬಹುದು. ಹೊಸ ಒಡಂಬಡಿಕೆಯಲ್ಲಿರುವ ಯೇಸುವಿನ ಸಕಲ ಬೋಧನೆಗಳನ್ನು ವೃತ್ತದ ಒಳಗಡೆ ಬರೆಯಿರಿ. ಆತನ ಬೋಧನೆಯಲ್ಲಿ ಇಲ್ಲದೆ ಇದ್ದು (ಆತನ ಆಯ್ಕೆಯು ಅದರಲ್ಲಿದ್ದರೆ) ಅಂಥವುಗಳನ್ನು ವೃತ್ತದ ಹೊರಗಡೆ ಬರೆಯಿರಿ. ಕರ್ತನ ಬೋಜನದ ವಿಷಯವನ್ನು ನಿದರ್ಶನ ಮಾಡಬಹುದು. “ರೊಟ್ಟಿಯನ್ನು” ಮತ್ತು “ದ್ರಾಕ್ಷಾರಸವನ್ನು” ಯೇಸು ಆಯ್ಕೆಮಾಡಿರುವನು (ಮತ್ತಾಯ 26:26-29). ಬೆಣ್ಣೆ ಮಾಂಸ ಮತ್ತು “ಸೇಬಿನ ರಸವನ್ನು” ವೃತ್ತದ ಹೊರಭಾಗದಲ್ಲಿ ಬರೆಯಿರಿ. ಈಗ ವೃತ್ತದ ಒಳಗಿನ ವಿಷಯಗಳನ್ನು ಆಚರಿಸಬಹುದೇ ವಿನ, ಯೇಸು ಬೋಧಿಸದೆ ಇರುವ, ವೃತ್ತದ ಹೊರಭಾಗದ ಆಚರಣೆಗಳನ್ನು ಮಾಡಬಾರದು. ಹೊರಗಿನದನ್ನು ಆಚರಣೆ ಮಾಡುವವನು ಯೇಸುವಿನ ಬೋಧನೆಗೆ ತದ್ವಿರುದ್ಧವಾಗಿರುವನು.

---

ಟಿಪ್ಪಣಿಗಳು

[1]John L. Girardeau, *Instrumental Music in the Public Worship of the Church* (Havertown, Pa.: New Covenant Publication Society, 1888; reprint, 1983), 3. [2]William Hendriksen, *I-II Timothy,* New Testament Commentary (Grand Rapids, Mich.: Baker Book House, 1974), 300.

---

## ಕ್ರೈಸ್ತರಿಗಾಗಿ ಇರುವ ಅಪ್ಪಣೆಗಳನ್ನು ತಿಳಿಯುವುದು

ಮೋಶೆಯ ಮೂಲಕ, ಇಸ್ರಾಯೇಲ್ಯರು ದೇವರಿಗೆ ವಿಧೇಯರಾಗಬೇಕಿದ್ದ ವ್ಯಾಖ್ಯಾನಗಳನ್ನು ತಿಳಿಸಲಾಯಿತು. ಅದೇ ವಿಧದಲ್ಲಿ, ಆತನ ಶಿಷ್ಯರು ಯೇಸುವಿನ ಪೂರ್ಣ ವಾದ ಉಪದೇಶವನ್ನು ಪಡೆದಿರುವರು ಯೇಸು ತಿಳಿಸಿರುವನು. ದೇವರು ಅದನ್ನು ಯೇಸುವಿನ ಮೂಲಕ ಪ್ರಕಟಿಸಿರುವದರಿಂದ ಅದು ಪ್ರಮುಖವಾದ ವಿಷಯವಾಗಿದೆ (ಇಬ್ರಿಯ 1:1, 2; ಮತ್ತೆ ನೋಡಿರಿ ಯೋಹಾನ 12:49, 50), ಯೇಸು ತನ್ನ ಎಲ್ಲಾ ಅಸತ್ಯವನ್ನು ಅಪೊಸ್ತಲರಿಗೆ ನೀಡಿರುವನು.

ಮೋಶೆಯ ಧರ್ಮಶಾಸ್ತ್ರವು ಇಸ್ರಾಯೇಲ್ಯರಿಗೆ ಮೀಸಲಾಗಿತ್ತು. ಕ್ರೈಸ್ತರು ಹೊಸ

ಒಡಂಬಡಿಕೆಗೆ, ಒಳಗಾಗಿರುವರು. ಜನರನ್ನು ಕ್ರಿಸ್ತನ ಬಳಿಗೆ ನಡೆಸುವ ಉಪದೇಶವನ್ನು ಧರ್ಮಶಾಸ್ತ್ರವು ನೀಡುತ್ತಿದ್ದರೂ (ಗಲಾತ್ಯ 3:24, 25), ಹಳೆ ಒಡಂಬಡಿಕೆಯು ಆರಾಧನೆಯ ಉಪದೇಶವನ್ನು ಮಾಡುವದಿಲ್ಲ. ಎರಡೂ ಒಡಂಬಡಿಕೆಗಳಲ್ಲೂ ಆರಾಧನೆಯಲ್ಲಿರುವ ವ್ಯತ್ಯಾಸಗಳನ್ನು ಕಾಣುತ್ತೇವೆ, ಆದುದರಿಂದ ಹಳೆ ಒಡಂಬಡಿಕೆಯಲ್ಲಿ ಬಳಸಲಾದ ವಾದ್ಯ ಗಳನ್ನು ಹೊಸ ಒಡಂಬಡಿಕೆಗಳಲ್ಲಿ ಬಳಸಿರುವದಿಲ್ಲ. ದೇವರು ಮತ್ತು ಯೇಸು ನಿರಂತರವಾಗಿ ಒಂದೇ ಆಗಿರುತ್ತಾರೆ (ಇಬ್ರಿಯ 13:8), ಇಸ್ರಾಯೇಲ್ಯರಿಂದ ದೇವರು ಬಯಸಿದ್ದನ್ನು ಹೊಸ ಒಡಂಬಡಿಕೆಯ ಕ್ರೈಸ್ತರಿಂದ ಬಯಸಿರುವದಿಲ್ಲ.

ಹಳೇ ಒಡಂಬಡಿಕೆಯ ಆಚರಣೆಯನ್ನು ಹೊಸ ಒಡಂಬಡಿಕೆಯ ಕ್ರೈಸ್ತರು ಅನುಸರಿಸಬೇಕೆಂಬ ಸೂಚನೆಯು ಇರುವದಿಲ್ಲ. ಹಳೆಯ ಒಡಂಬಡಿಕೆಯ ಆಚರಣೆಯನ್ನು ಮಾಡುವ ಜನರು, ಇತರೆ ಕಟ್ಟಳೆಗಳನ್ನು ಸಹ ಅವರು ಆಚರಿಸ ಬೇಕು. ಒಬ್ಬನು ಅದೇಕ್ಕೆ ಒಳಗಾದರೆ, ಎಲ್ಲರೂ ಅದಕ್ಕೆ ಒಳಗಾಗುವರು. ಗಲಾತ್ಯ 5:3ರಲ್ಲಿ ಪೌಲನು ಈ ಅಂಶವನ್ನು ತಿಳಿಸಿರುವನು.

ಅಪೊಸ್ತಲರು ಮತ್ತು ಪ್ರವಾದಿಗಳು ದೇವರ ವಾಕ್ಯದ ಪ್ರಕಟನೆಯ ಮೂಲಕ ಕ್ರೈಸ್ತರ ಯುಗವನ್ನು ಬದಲಾಯಿಸಿದರು. ಆತನು ನಮಗೆ ನೀಡಿರುವ ಅಪ್ಪಣೆಗಳನ್ನು ನಾವುಗಳು ತಿಳಿಯಲು ಸಾಧ್ಯವಿದೆ (ನೋಡಿರಿ ಎಫೆಸ 3:4, 5).

ಬೇರೆ ಯಾವ ಪುಸ್ತಕಗಳು ದೇವ ವಾಕ್ಯವನ್ನು ಒಳಗೊಂಡಿರುವದಿಲ್ಲ. ಬೈಬಲನ್ನು ಗಂಭೀರವಾಗಿ ಧ್ಯಾನಿಸಿ ಸಂಪೂರ್ಣವಾಗಿ ಅನುಸರಿಸಬೇಕು, "ದೇವರ ಶಕ್ತಿಯು ನಮಗೆ ಪರಿಜ್ಞಾನವನ್ನು" ನೀಡುತ್ತದೆ (2 ಪೇತ್ರ 1:3). ಯಾವುದೇ ವಿಧವಾದ ಕ್ರೈಸ್ತ ಚಟುವಟಿಕೆಯನ್ನು ಆಚರಿಸಬೇಕು ಎಂದು ಹೊಸ ಒಡಂಬಡಿಕೆಯಲ್ಲಿ ಯಾರು ತಿಳಿಸಿರುವದಿಲ್ಲ. ಆದಾಗ್ಯೂ ನಾವು ಆರಾಧನೆಯಲ್ಲಿ ಮಾಡಬೇಕಾದ ಸಕಲ ವಿಷಯಗಳನ್ನು ತಿಳಿಸಲಾಗಿರುವದಿಲ್ಲ.

ದೇವರ ಸೇವೆಯ ಕುರಿತಾಗಿ ಬೈಬಲಿನಲ್ಲಿ ಎಲ್ಲವನ್ನು ತಿಳಿಸಲಾಗಿದೆ. ಅವುಗಳು ನಮ್ಮನ್ನು ಪೂರ್ಣ ಮಾಡುತ್ತವೆ, ಅದು ಉಪದೇಶಕ್ಕೂ, ಖಂಡನೆಗೂ ತಿದ್ದು ಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ, ಇದರಿಂದ ದೇವರ ಮನುಷ್ಯನು ಪ್ರವೀಣನಾಗುವನು (2 ತಿಮೊಥೆ 3:16, 17). ಇದಕ್ಕೆ ಏನನ್ನಾದರೂ ಸೇರಿಸುವವರು, ಪೂರ್ಣವಾದ್ದಕ್ಕೆ ಸೇರಿ ಸುವವರಾಗಿರುವರು. ಶಾಸ್ತ್ರಗಳಲ್ಲಿ ತಿಳಿಸಲಾರದ ಆಚರಣೆಗಳನ್ನು ಅನುಸರಿಸುವುದು ಯೇಸುವಿನಿಂದ ಉಂಟಾದದ್ದಲ್ಲ, ಆದುದರಿಂದ ಅದನ್ನು ಅನುಸರಿಸಬಾರದು. ಯೇಸು ಮಾತ್ರ, ಮಾರ್ಗವಾಗಿರುವದರಿಂದ, ಸಂಪೂರ್ಣ ಪ್ರಕಟನೆಯನ್ನು ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ, ಪ್ರಕಟಗೊಂಡ ವಿಷಯಗಳನ್ನೆ ಅನುಸಾರ ಮಾಡಬೇಕು, ಬೇರೆಯದನ್ನು ಅನುಸರಣೆ ಮಾಡಬಾರದು.

ಒಂದು ಆಚರಣೆ ದೈವಿಕವಾದದ್ದು ಎಂದು ತಿಳಿಯಬೇಕಾದರೆ ನಾಲ್ಕು ವಿಷಯಗಳನ್ನು ಗಮನಿಸೋಣ: (1) ವಿಧೇಯರಾಗುವದಕ್ಕೆ ದೇವರ ಅಪ್ಪಣೆಗಳು; (2) ದೇವರು ನಿರಾಕರಿ ಸಿರುವದನ್ನು ಮಾಡಬಾರದು; (3) ದೇವರ ಆಯ್ಕೆಗೆ ಅನುಗುಣವಾಗಿ ಮಾಡಬೇಕು; (4) ದೇವರ ನಿರ್ದಿಷ್ಟವಾದ ಆಯ್ಕೆಗಳನ್ನು ಮಾಡಲು ತಿಳುವಳಿಕೆಯನ್ನು ಹೊಂದಿಕೊಳ್ಳಬೇಕು.